# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ತಿಪ್ಪೆಸ್ವಾಮಿ, ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಸಾರ್ವಜನಿಕರ ನೌಕರರಾಗಿದ್ದು, ದುರ್ವರ್ತನೆಯಿಂದ ನಡೆದುಕೊಂಡಿರುವ ಬಗ್ಗೆ.

**ಓದಲಾಗಿದೆ:** ಮಾನ್ಯ ನಿಬಂಧಕರು, ಮಾನ್ಯ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: Compt/Uplok/BD-6738/2014/ ARLO1 ದಿನಾಂಕ: 30–03–2017.

**ಪ್ರಸ್ತಾವನೆ:**

ಈ ಪ್ರಕರಣದಲ್ಲಿ ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತ–2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3)ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ, ಶ್ರೀ ಕೆ.ಜಿ. ರಂಗಧಾಮಯ್ಯ ಮಾಜಿ ಸದಸ್ಯರು ಕಂದೀಕೆರೆ ಗ್ರಾಮ ಪಂಚಾಯತ್, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು ಈ ದೂರನ್ನು ಶ್ರೀ ತಿಪ್ಪೆಸ್ವಾಮಿ, ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಹಾಗೂ ಶ್ರೀ ಸಿ. ಲೋಕೇಶ್ ಅಧ್ಯಕ್ಷರು ಕಂದೀಕೆರೆ ಗ್ರಾಮ ಪಂಚಾಯತ್, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧ ದಾಖಲಿಸಿ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಕಂದೀಕೆರೆ ಗ್ರಾಮ ಪಂಚಾಯತಿಯಲ್ಲಿ 2014–15ಸಾಲಿನ 13ನೇ ಹಣಕಾಸು ಯೋಜನೆಯಲ್ಲಿ ಹಣ ದುರುಪಯೋಗ ಮಾಡಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

ಸದರಿ ದೂರನ್ನು ದಾಖಲು ಮಾಡಿಕೊಂಡು, ದೂರಿನಲ್ಲಿನ ಸತ್ಯಾಂಶ ಅರಿಯಲು, ದೂರಿನ ತನಿಖೆ ಮತ್ತು ವರದಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಚಿಕ್ಕನಾಯಕನಹಳ್ಳಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಸಂಬೋಧಿಸಿಲಾಗುವುದು) ರವರಿಗೆ ದೂರುದಾರರ ದೂರಿಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಲಾಗಿದ್ದು ಸದರಿಯವರು ದೂರಿನ ಮೇಲೆ ತನಿಖೆ ಮಾಡಿ, ಸಂಬಂಧಪಟ್ಟ ದಾಖಲಾತಿಗಳೊಂದಿಗೆ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

**ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ:–**

1) 13ನೇ ಹಣಕಾಸು ಮಾರ್ಗಸೂಚಿಯನ್ವಯ ಶೇ.25ರಷ್ಟನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಪೂರ್ಣ ಪ್ರಮಾಣದ ಮೊತ್ತವನ್ನು ಮೀಸಲಿಟ್ಟಿಲ್ಲ;
2) ಸದರಿ ಯೋಜನೆಯಡಿ ಅಳತೆ ಪುಸ್ತಕದಲ್ಲಿ ದಾಖಲಿಸಬೇಕಾದ 21 ಕಾಮಗಾರಿಗಳನ್ನು ತೆಗೆದುಕೊಂಡು ಅದರಲ್ಲಿ 9 ಕಾಮಗಾರಿಗಳನ್ನು ದಾಖಲಿಸಿ ಉಳಿಕೆ 12 ಕಮಗರಿಗಳ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದಿಸಿಲ್ಲ;
3) ಎಂಟು(8)ಕಾಮಗಾರಿಗಳಗೆ ಆಡಳಿತಾತ್ಮಕ ಮಂಜೂರತಿ ಮತ್ತು ತಾಂತ್ರಿಕ ಮಂಜೂರಾತಿ ದಾಖಲಿಸಿಲ್ಲ;
4) ಸದರಿ ಕಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ಕಾಮಗಾರಿ ಆದೇಶ ಮತ್ತು ಪೂರ್ಣಗೊಂಡ ವರದಿ ನೀಡಿರುವ ಬಗ್ಗೆ ದಾಖಲೆಗಳಿಲ್ಲ;
5) ಖರೀದಿ ಕಡತಗಳಲ್ಲಿ ಕರ್ನಾಟಕ ಪರದರ್ಶಕ ಅಧಿನಿಯಮ 1999 ಮತ್ತು 2000ದ ನಿಯಮಗಳನ್ನು ಪೂರ್ಣವಾಗಿ ಪಲಿಸಿಲ್ಲ;
6) ಎನ್ ಎಂ ಆರ್ ಗಳ ಮೂಲಕ ಹಣ ಡ್ರಾ ಮಡಿದ್ದು, ಅಭಿಯಂತರರು ದೃಢೀಕರಿಸಿಲ್ಲ;
7) ಕ್ರಿಯಾ ಯೊಜನೆ ಸಂಖ್ಯೆ:2ರ ಕಮಗಾರಿಗಳನ್ನು ಬದಲವಣೆ ಮಾಡಿ ನಿರ್ವಹಿಸಿರುವ ಮೊತ್ತ 44,000ರೂ ಕಾಮಗಾರಿ ಬದಲಾವಣೆ ಬಗ್ಗೆ ಸಭಾ ನಡವಳಿಯಿಲ್ಲ;

8) ಅ) ಡಿಸಿಬಿ ನಂ.13ರಲ್ಲಿ ಕ್ರಿಯಾ ಯೋಜನೆಯಲ್ಲಿ ಇಲ್ಲದ ಕಾಮಗಾರಿಗಳಿಗೆ ಡ್ರಾ ಮಾಡಿರುವ ಮೊತ್ತ ರೂ 4,872/–

ಆ) ಡಿಸಿಬಿ ನಂ.14ರಲ್ಲಿ ಕ್ರಿಯಾ ಯೋಜನೆಯಲ್ಲಿ ಇಲ್ಲದ ಕಾಮಗಾರಿಗಳಿಗೆ ಡ್ರಾ ಮಾಡಿರುವ ಮೊತ್ತ ರೂ 4,350/–;

ಇ) ಡಿಸಿಬಿ ನಂ.12ರಲ್ಲಿ ಕ್ರಿಯಾ ಯೋಜನೆ ಸಂಖ್ಯೆ:22ರ ಕಾಮಗಾರಿಗೆ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಡ್ರಾ ಮಾಡಿರುವ ಮೊತ್ತ ರೂ 5,744/–;

ಈ) ಡಿಸಿಬಿ ನಂ.37ರಲ್ಲಿ ಕ್ರಿಯಾ ಯೋಜನೆ ಸಂಖ್ಯೆ:40ರ ಕಾಮಗಾರಿಗೆ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಡ್ರಾ ಮಾಡಿರುವ ಮೊತ್ತ ರೂ 5,769/–;

ಉ) ಕ್ರಿಯಾ ಯೊಜನೆ ಸಂಖ್ಯೆ:35,36,37 ರಲ್ಲಿ ಅಂದಾಜು ಮೊತ್ತ ರೂ 2,97,000/–ನಿಗಧಿ ಮಾಡಿದ್ದು, ಅದರ ಪೈಕಿ ರೂ3,43,425/–ನ್ನು ಡ್ರಾ ಮಡಲಗಿದೆ.ಅಂದಾಜಿಗಿಂತ ಅಧಿಕವಾಗಿ ಡ್ರಾ ಮಾಡಿರುವ ಮೊತ್ತ ರೂ67,160/– ಆಗಿದೆ.

ಸದರಿ ನ್ಯೂನತೆಗಳಿಗೆ ಎದುರುದಾರುಗಳೇ ಹೊಣೆಗಾರರಾಗಿದ್ದಾರೆ ಹಾಗೂ ರೂ67,160/–ನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

**ದೂರು ಮತ್ತು ವರದಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ–**

ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಅಡಳಿತಾತ್ಮಕ ಅನುಮೋದನೆ ಪಡೆಯಲಗಿದೆ ಹಾಗೂ ಪಾರದರ್ಶಕದ ಅಧಿನಿಯಮದ ನಿಯಮಗಳನ್ನು ಪಾಲಿಸಲಾಗಿದೆ. ಆದರೆ ಕಿರಿಯ ಅಭಿಯಂತರವರ ಸಹಿಯನ್ನು ಪಡೆಯದೇ ಹಣ ಡ್ರಾ ಮದಿರುವುದು ಸತ್ಯವಾಗಿದೆ ಮತ್ತು ಗ್ರಾಮಸ್ಥರು ಹಾಗೂ ಅಧ್ಯಕ್ಷರ ಒತ್ತಾಯದ ಮೇರೆಗೆ ಕೂಲಿಕರರಿಗೆ ತುರ್ತಾಗಿ ಕೂಲಿ ಮೊತ್ತವನ್ನು ಸಂದಾಯ ಮಾಡಬೇಕದ ಕಾರಣ ಈ ಎಲ್ಲಾ ನ್ಯೂನತೆಗಳು ಆಗಿದೆಯೆಂದು ಹೇಳಿದ್ದಾರೆ.

**ಕಡತ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:–**

1. 13ನೇ ಹಣಕಾಸು ಮಾರ್ಗಸೂಚಿಯನ್ವಯ ಶೇ.25ರಷ್ಟನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಪೂರ್ಣ ಪ್ರಮಾಣದ ಮೊತ್ತವನ್ನು ಮೀಸಲಿಟ್ಟಿಲ್ಲ;
2. ಸದರಿ ಯೋಜನೆಯಡಿ ಅಳತೆ ಪುಸ್ತಕದಲ್ಲಿ ದಾಖಲಿಸಬೇಕಾದ 21 ಕಾಮಗಾರಿಗಳನ್ನು ತೆಗೆದುಕೊಂಡು ಅದರಲ್ಲಿ 9 ಕಾಮಗಾರಿಗಳನ್ನು ದಾಖಲಿಸಿ ಉಳಿಕೆ 12 ಕಮಗರಿಗಳ ಬಗ್ಗೆ ಅಳತೆ ಪುಸ್ತಕದಲ್ಲಿ ನಮೂದಿಸಿಲ್ಲ;
3. ಎಂಟು(8)ಕಾಮಗಾರಿಗಳಗೆ ಆಡಳಿತಾತ್ಮಕ ಮಂಜೂರತಿ ಮತ್ತು ತಾಂತ್ರಿಕ ಮಂಜೂರಾತಿ ದಾಖಲಿಸಿಲ್ಲ;
4. ಸದರಿ ಕಮಗಾರಿ ಗಳನ್ನು ನಿರ್ವಹಿಸಿದ ಬಗ್ಗೆ ಕಾಮಗಾರಿ ಆದೇಶ ಮತ್ತು ಪೂರ್ಣಗೊಂಡ ವರದಿ ನೀಡಿರುವ ಬಗ್ಗೆ ದಾಖಲೆಗಳಿಲ್ಲ;
5. ಖರೀದಿ ಕಡತಗಳಲ್ಲಿ ಕರ್ನಾಟಕ ಪರದರ್ಶಕ ಅಧಿನಿಯಮ 1999 ಮತ್ತು 2000ದ ನಿಯಮಗಳನ್ನು ಪೂರ್ಣವಾಗಿ ಪಲಿಸಿಲ್ಲ;
6. ಎನ್ ಎಂ ಆರ್ ಗಳ ಮೂಲಕ ಹಣ ಡ್ರಾ ಮಡಿದ್ದು, ಅಭಿಯಂತರರು ದೃಢೀಕರಿಸಿಲ್ಲ;
7. ಕ್ರಿಯಾ ಯೊಜನೆ ಸಂಖ್ಯೆ:2ರ ಕಮಗಾರಿಗಳನ್ನು ಬದಲವಣೆ ಮಾಡಿ ನಿರ್ವಹಿಸಿರುವ ಮೊತ್ತ 44,000ರೂ ಕಾಮಗಾರಿ ಬದಲಾವಣೆ ಬಗ್ಗೆ ಸಭಾ ನಡವಳಿಯಿಲ್ಲ;
8. ಅ)ಡಿಸಿಬಿ ನಂ.13ರಲ್ಲಿ ಕ್ರಿಯಾ ಯೋಜನೆಯಲ್ಲಿ ಇಲ್ಲದ ಕಾಮಗಾರಿಗಳಿಗೆ ಡ್ರಾ ಮಾಡಿರುವ ಮೊತ್ತ ರೂ 4,872/–

ಆ) ಡಿಸಿಬಿ ನಂ.14ರಲ್ಲಿ ಕ್ರಿಯಾ ಯೋಜನೆಯಲ್ಲಿ ಇಲ್ಲದ ಕಾಮಗಾರಿಗಳಿಗೆ ಡ್ರಾ ಮಾಡಿರುವ ಮೊತ್ತ ರೂ 4,350/–

ಇ) ಡಿಸಿಬಿ ನಂ.12ರಲ್ಲಿ ಕ್ರಿಯಾ ಯೋಜನೆ ಸಂಖ್ಯೆ:22ರ ಕಾಮಗಾರಿಗೆ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಡ್ರಾ ಮಾಡಿರುವ ಮೊತ್ತ ರೂ 5,744/–

ಈ) ಡಿಸಿಬಿ ನಂ.37ರಲ್ಲಿ ಕ್ರಿಯಾ ಯೋಜನೆ ಸಂಖ್ಯೆ:40ರ ಕಾಮಗಾರಿಗೆ ಅಂದಾಜು ಮೊತ್ತಕ್ಕಿಂತ ಹೆಚ್ಚಿಗೆ ಡ್ರಾ ಮಾಡಿರುವ ಮೊತ್ತ ರೂ 5,769/–

ಉ) ಕ್ರಿಯಾ ಯೋಜನೆ ಸಂಖ್ಯೆ:35,36,37 ರಲ್ಲಿ ಅಂದಾಜು ಮೊತ್ತ ರೂ 2,97,000/-ನಿಗಧಿ ಮಾಡಿದ್ದು, ಅದರ ಪೈಕಿ ರೂ3,43,425/-ನ್ನು ಡ್ರಾ ಮಡಲಗಿದೆ.ಅಂದಾಜಿಗಿಂತ ಅಧಿಕವಾಗಿ ಡ್ರಾ ಮಾಡಿರುವ ಮೊತ್ತ ರೂ67,160/- ಆಗಿದೆ.

ಸದರಿ ನ್ಯೂನತೆಗಳಿಗೆ ಎದುರುದಾರರೇ ಹೊಣೆಗಾರರಾಗಿದ್ದಾರೆ ಹಗೂ ರೂ67,160/-ನ್ನು ದುರುಪಯೋಗ ಪಡಿಸಿಕೊಂಡಿರುವುದು ಮೆಲ್ನೋಟಕ್ಕೆ ಕಂಡು ಬಂದಿದೆ. ಕಾರಣ ಎದುರುದಾರರು ಕರ್ನಾಟಕ ಪಾರದರ್ಶಕ ನಿಯಮ ಮತ್ತು ಯೋಜನೆ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದು, ಎದುರುದಾರರು ರೂ33,580/-ಗಳನ್ನು ದುರುಂಪಯೋಗ ಪಡಿಸಿಕೊಂಡಿರುವುದು ಕಂಡು ಬಂದಿದೆ.

ಮೇಲ್ಕಂಡ ಅಂಶಗಳು,ಕಡತದ ಸಂಗತಿಗಳು, ದಾಖಲಾತಿಗಳನ್ನು, ತನಿಖಾಧಿಕರಿಗಳ ವರದಿ ಹಗೂ ಎದುರುದಾರರ ಆಕ್ಷೇಪಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ,ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಸದರಿ ದುರುಪಯೋಗವಾದ ಮೊತ್ತ ರೂ33,580/-ನ್ನು ಶ್ರೀ.ತಿಪ್ಪೆಸ್ವಾಮಿ, ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಾಯಿತಿ ,ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರಿಂದ ವಸೂಲಿ ಮಾಡಿ, ಕ್ರಿಮಿನಲ್ ಪ್ರಕರಣ ದಾಖಲಿಸಲು ಪ್ರಾಧಿಕಾರಕ್ಕೆ ಸೂಚಿಸಿರುತ್ತಾರೆ.

ಶ್ರೀ ಸಿ.ಲೋಕೇಶ್ ಅಧ್ಯಕ್ಷರು ಕಂದೀಕೆರೆ ಗ್ರಾಮ ಪಂಚಾಯತ್, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರಿಂದ ದುರುಪಯೋಗವಾದ ಮೊತ್ತ ರೂ33,580/-ನ್ನು ವಸೂಲಿ ಮಾಡಿ, ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ತುಮಕೂರು ಜಿಲ್ಲೆ ರವರಿಗೆ ಪತ್ರ ಬರೆಯಲಾಗಿದೆ.

ಶ್ರೀ ತಿಪ್ಪೆಸ್ವಾಮಿ, ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಾಯಿತಿ ,ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ, ಇವರು ಸಾರ್ವಜನಿಕ ಸರ್ಕಾರಿ ನೌಕರರಾಗಿದ್ದು, ಇವರ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ ಕರ್ತವ್ಯ ಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ ಸರ್ಕಾರಿ ನೌಕರರಾಗಿದ್ದು ದುರ್ವತನೆಯಿಂದ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಆದ್ದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು, 1957 ರ ನಿಯಮ 14-ಎ ರಡಿಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕೆ-2ರವರಿಗೆ ವಹಿಸಲು ಕೋರಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತರು-2, ಬೆಂಗಳೂರು ರವರ ವರದಿಯನ್ನು ಪರಿಶೀಲಿಸಿ, ಶ್ರೀ ತಿಪ್ಪೆಸ್ವಾಮಿ, ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಾಯಿತಿ ,ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ, ಇವರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಇವರ ವಿರುದ್ಧ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957 ರ ನಿಯಮ 14-ಎ ರನ್ವಯ ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/285/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 22-04-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ತಿಪ್ಪೆಸ್ವಾಮಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ.
6) ಶ್ರೀ ತಿಪ್ಪೆಸ್ವಾಮಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಂದೀಕೆರೆ ಗ್ರಾಮ ಪಂಚಯತಿ, ಚಿಕ್ಕನಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
7) ಗಣಕ ಕೋಶ.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.